ಶ್ರೀ ಜಿ. ರಾಮೇಗೌಡ.—ನನ್ನ ಸ್ನೇಹಿತರು ಪ್ರಶ್ನೆಗೆ ಉತ್ತರವಾಗಿ ಬಿ. ಟಿ. ಎಸ್. ಬಸ್‌ಗಳ ಫುಟ್-ಬೋರ್ಡ್ ಮೇಲೆ ನಿಂತು ಪ್ರಯಾಣ ಮಾಡುವವರ ಮೇಲೆ ಕೇಸ್ ಹಾಕುವುದನ್ನು ತಪ್ಪಿಸಲು ಪ್ರಯತ್ನ ಮಾಡುವುದಾಗಿ ಹೇಳಿದಿರಿ. ಆದೆರೀತಿ ರೋಡ್-ಟ್ರಾನ್ಸ್‌ಪೋರ್ಟ್ ಬಸ್‌ಗಳಲ್ಲಿಯೂ ಸಹ ಫುಟ್-ಬೋರ್ಡ್ ಮೇಲೆ ನಿಂತುಕೊಂಡು ಪ್ರಯಾಣ ಮಾಡುವುದಕ್ಕೆ ಅನುಮತಿ ಕೊಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದು ಈಗ ನಮ್ಮ ಆಲೋಚನೆಯಲ್ಲಿಲ್ಲ.

ಶ್ರೀ ಜಿ. ರಾಮೇಗೌಡ.—ಬಾನೆಟ್ ಮೇಲೆ ಕೂತು ಪ್ರಯಾಣ ಮಾಡುವುದನ್ನಾದರೂ ತಪ್ಪಿಸುತ್ತೀರಾ ಹೇಗೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದನ್ನು ತಪ್ಪಿಸುತ್ತೇವೆ.

ಶ್ರೀ ಪಿ. ರಾಮದೇವ್.—ಕೋಟ್ಯಾಂತರ ರೂ. ಗಳಷ್ಟು ನಷ್ಟವಾಗುವುದನ್ನು ತಪ್ಪಿಸಲು ದರ ಗಳನ್ನು ಹೆಚ್ಚು ಮಾಡಿದಿರಿ. ಆದರೆ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವವರನ್ನು ಎಷ್ಟು ಜನರನ್ನು ಹಿಡಿದಿದ್ದೀರಿ ಮತ್ತು ಎಷ್ಟು ತಂಡವನ್ನು ಪತೂಲಿ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

SRI M. M. J. SADYOJATHA.—I want notice for that question.

ಶ್ರೀ ಪಿ. ರಾಮದೇವ್.—ತಮ್ಮ ಬಿ. ಟಿ. ಎಸ್, ಬಸ್‌ಗಳಲ್ಲಿ ಪ್ರಯಾಣ ಮಾಡುವ ವಿದ್ಯಾರ್ಥಿ ಗಳಿಗೂ ಮತ್ತು ಕಂಡಕ್ಟರ್‌ಗಳಿಗೂ ಆಗಾಗ್ಗೆ ವೈಮನಸ್ಯ ಬಂದು ಮುಷ್ಕರಗಳಾಗುತ್ತಿವೆ. ಇದನ್ನು ತಪ್ಪಿಸಲು, ರೋಡ್-ಬಿಹೇವಿಯರ್‌ನ್ನು ತಪ್ಪಿಸಲು ಪಾಸೂ ಪಿಕ್-ಪಾಕೇಟ್ ಆಗುವುದನ್ನು ತಪ್ಪಿಸಲು ತಾವು ಏನಾದರು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ತಜ್ಞರ ಸಮಿತಿಯಲ್ಲಿ ಎಲ್ಲ ಸರ್ಕಾರದ ಅಧಿಕಾರಿಗಳೇ ಇದ್ದಾರೆ. ಈ ಸರ್ಕಾರದಲ್ಲಿ ತಜ್ಞರ ಸಮಿತಿಗೆ ಏನಾದರೂ ಡೆಫನಿಷನ್ ಇದೆಯೇ ಹೇಗೆ ? ಇದಕ್ಕೆ ಏನಾದರೂ ಅರ್ಥವಿದೆಯೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ಇನ್ನೊಂದು ಯೋಚನೆ ಇದೆ. The Government is now considering to re-constitute the Committee with the experts in the field of transport, traffic, engineering, Urban Development etc. We are thinking of it.

Master Plan for the Development of Forests for Bijapur District.

505. SRI M. H. BEKINALKAR (Sindgi).—Will the Minister Forest Mines and Geology be pleased to state —

(a) whether a master plan for the development of forest for Bijapur District is prepared.

(b) if so, the extent of area covered in Sindgi taluk ;

(c) the area covered in other taluks (Talukwise figures may please be furnished) ?

SRI G. MADEGOWDA. (Minister for Forest, Mines and Geology).—

(a) Yes.

(b) An area of about 800 Hectares target is fixed in Sindgi Taluk from 1981-82 to 1989-90 at the rate of 100 Hectares annually.

(c) The target fixed for the afforestation work in Bijapur District for 8 years from 1981-82 to 1989-90 is as detailed below.—

	Range/Taluks	Target in Hectares 1981-82 to 1989-90 (8 years)	Annnally (in Hect)
	1	2	3
1.	Badami ...	6,400	800
2.	Bagalkot ...	4,000	500
3.	Bilgi ...	4,000	500
4.	Hungund ...	4,000	500
5.	Mudhol ...	3,200	400
6.	Jamakhandi ...	4,800	600
7.	Bijapur ...	800	100
8.	Indi ...	800	100
9.	Sindgi ..	800	100
10.	B. Bagewadi ...	800	100
11.	Muddebihal ...	800	100
	Grand Total of Bijapur District (including Sindgi Taluk)	30,400	3,800

ಶ್ರೀ ಎಂ. ಎಚ್. ಬೆಕಿನಾಳಕರ್.—ಇಲ್ಲಿ ಇಂಡಿ, ಸಿಂಧಗಿ, ಮುದ್ದೇಬಿಹಾಳ್ ಹಾಗೂ ಕೆಲವು ತಾಲ್ಲೂಕ್‌ಗಳಲ್ಲಿ ೮೦೦ ಹೆಕ್ಟೇರ್‌ಗಳಲ್ಲಿ ಮಾತ್ರ ವನ ಬೆಳಸುವ ಕಾರ್ಯ ಇಟ್ಟುಕೊಂಡಿದ್ದೀರಿ. ಇದನ್ನು ಜಾಸ್ತಿ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ಬಿಜಾಪುರ ಜಿಲ್ಲೆಯಲ್ಲಿ ಸುಮಾರು ೮೩ ಸಾವಿರ ಎಕರೆಯಷ್ಟು ಫಾರೆಸ್ಟ್ ಲ್ಯಾಂಡ್ ಇದೆ, ಇದರ ಜೊತೆಗೆ ರೆವಿನ್ಯೂ ಲ್ಯಾಂಡ್ ೧ ಸಾವಿರ ಎಕರೆಯಷ್ಟು ನಮಗೆ ಟ್ರಾನ್ಸ್‌ಫರ್ ಆಗಿದೆ. ಈಗ ಒಂದು ಮಾಸ್ಟರ್ ಪ್ಲಾನ್ ಮಾಡಿದ್ದೇವೆ, ಇದರ ಪ್ರಕಾರ ೧೯೮೧ ರಿಂದ ೧೯೯೦ರ ವರೆಗೆ ಅರಣ್ಯ ಬೆಳೆಸಲು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರ ಪ್ರಕಾರ ಪ್ರತಿವರ್ಷ ೮೦೦ ಹೆಕ್ಟಾರ್ ಪ್ರದೇಶದಲ್ಲಿ ಅರಣ್ಯ ಬೆಳಸಬೇಕೆಂಬ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಇದರ ಜೊತೆಗೆ ವಿಶ್ವ ಬ್ಯಾಂಕ್‌ನ ಸಹಾಯ ಪಡೆದುಕೊಳ್ಳಲು ೬೦ ಕೋಟಿ ರೂ.ಗಳ ಒಂದು ಯೋಜನೆಯನ್ನು ಅಲ್ಲಿಗೆ ಕಳಿಸಿಕೊಟ್ಟಿದ್ದೇವೆ. ಅದು ಇನ್ನು ಒಂದೆರಡು ತಿಂಗಳುಗಳಲ್ಲಿ ಕ್ಲಿಯರ್ ಆಗಬಹುದು. ಅಲ್ಲಿಂದ ಹಣ ಬಂದಂತರ ಬಿಜಾಪುರ ಜಿಲ್ಲೆಯಲ್ಲಿ ರಸ್ತೆಗಳ ಪಕ್ಕದಲ್ಲಿ ಹಾಗೂ ಇನ್ನಿತರ ಭಾಗಗಳಲ್ಲಿ ೩-೪ ವರ್ಷ ಗಳಲ್ಲಿ ಹೆಚ್ಚಿನ ಗಿಡಗಳನ್ನು ಬೆಳೆಸಬೇಕೆಂದಿದ್ದೇವೆ.

ಶ್ರೀ ಎಂ. ಎಚ್. ಬೆಕಿನಾಳಕರ್—ಇಂಡಿ, ಸಿಂಧಗಿ, ಬಸವನ ಬಾಗೇವಾಡಿ, ಮುದ್ದೇಬಿಹಾಳ್ ಇಲ್ಲಿ ಕಳೆದ ವರ್ಷ ಗಿಡಗಳನ್ನು ಬೆಳೆಸಲು ತಾವು ಕಾರ್ಯಕ್ರಮ ಹಾಕಿಕೊಂಡಿದ್ದಿರಿ. ಆದರೆ ಯಾವ ಗಿಡಗಳೂ ಹುಟ್ಟಲಿಲ್ಲ, ಏನಿದ್ದರೂ ಬಳ್ಳಾರಿ ಜಾಲಿ ಕೊಂಚ ಕೊಂಚ ಬಂದಿದೆ. ಇದರಿಂದ ನಿಮ್ಮ ಹಣವೆಲ್ಲಾ ವ್ಯರ್ಥವಾಗುತ್ತಿದೆ. ಆದ್ದರಿಂದ ಅಲ್ಲಲ್ಲೇ ರಿಗ್ ಯಂತ್ರಗಳನ್ನು ಹಾಕಿ,ಆ ನೀರಿನ ಸಹಾಯ ದಿಂದ ಬೇರೆ ಗಿಡಗಳನ್ನು ಬೆಳೆಸುತ್ತೀರಾ ?

ಶ್ರೀ ಜಿ. ಮಾದೇಗೌಡ,—ಈಗ ಬಳ್ಳಾರಿ ಜಾಲಿ ಎಲ್ಲ ಕಡೆಯೂ ಬರುತ್ತಿದೆ. ಗುಲ್ಬರ್ಗ ರಾಯಚೂರು, ಬೀದರ್, ಇಲೆಲ್ಲಾ ಬಳ್ಳಾರಿ ಜಾಲಿ ಬೆಳೆದಿದೆ. ಇದನ್ನು ಮುಖ್ಯವಾಗಿ ಸೌದೆಗೆ ಉಪಯೋಗಿಸುತ್ತಾರೆ. ಇದರ ಜೊತೆಗೆ ಹೊಂಗೆ, ಗೊಬ್ಬಳಿ. ಮುಂತಾದ ಗಿಡಗಳನ್ನು ಸಹ ಬೆಳೆಸುತ್ತಿದ್ದೇವೆ. ಇವು ಚೆನ್ನಾಗಿ ಬರುತ್ತಿವೆ.

ಶ್ರೀ ಎಂ ಸಿ. ನಾನಯ್ಯ.—ಈಗ ಸರ್ಕಾರದವರು ಅರಣ್ಯಗಳನ್ನು ಬೆಳೆಸುವ ಬಗ್ಗೆ ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದಾರೆ, ಇದರ ಜೊತೆಗೆ ಪ್ರಕೃತಿಯಿಂದ ಏನು ಸ್ವಲ್ಪ ಅರಣ್ಯ ಉಳಿದುಕೊಂಡಿದೆ ಅಂದರೆ ಮೇಜರ್ ರಿಪರ್ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಕೊಂಚ ಅರಣ್ಯ ಏನು ಉಳಿದಿದೆ. ಅದನ್ನೂ ಸಹ ವಾತಾವರಣದ ಸಮತೋಲನದ ಬಗ್ಗೆ ತಮಗೇನಾದರೂ ಸ್ವಲ್ಪ ಕಾಳಜಿ ಇದ್ದರೆ ಸಂರಕ್ಷಣೆ ಮಾಡುತ್ತೀರಾ ? ಈಗ ಪ್ರತಿವರ್ಷವೂ ೬೦ ಲಕ್ಷ ಘನ ಅಡಿಗಳಷ್ಟು ಮರವನ್ನು ಕಡಿಯಲಾಗುತ್ತಿದೆ ಈ ರೀತಿ ಕಡಿಯುವುದನ್ನು ತಡೆಗಟ್ಟಲಾಗುವುದೆಂಬ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ಇದಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಇದು ಬಿಜಾಪುರಕ್ಕೆ ಸಂಬಂಧಪಟ್ಟ ಪ್ರಶ್ನೆ. ಆದರೂ ಕೂಡ ನಾನು ಹೇಳುತ್ತೇನೆ. ನಮ್ಮ ಕಾಲದಲ್ಲಿ ಅರಣ್ಯವನ್ನು ಉಳಿಸಬೇಕು, ಬೆಳೆಸಬೇಕು ಹಾಗೂ ರಚನೆ ಮಾಡಬೇಕು, ತತ್ಕ್ಷಾಲಕ ಈ ದೇಶ ಸಂವೃದ್ಧಿಯಾಗಬೇಕೆಂಬ ಉತ್ಕಟ ಇಚ್ಛೆ ಈ ಹಿಂದಿನ ಸರ್ಕಾರಕ್ಕಿಂತ ಹೆಚ್ಚಿಗೆ ಈಗಿನ ಸರ್ಕಾರಕ್ಕೆ ಇದೆ.

ಶ್ರೀ ವಿ. ವಿ. ಪತ್ತಾರ್.—ನಮ್ಮ ಜಮಖಂಡಿ ಪ್ರದೇಶದಲ್ಲಿ ಗುಡ್ಡಗಾಡು ಪ್ರದೇಶ ಜಾಸ್ತಿ ಇರುವುದರಿಂದ ಅಲ್ಲಿ ಯಾವ ಗಿಡಗಳೂ ಸಹ ಬೆಳೆಯುವುದಿಲ್ಲ. ಏನಿದ್ದರೂ ಅಲ್ಲಿ ರಾಮಜಾಜಿ ಗಿಡಗಳನ್ನು ಬೆಳೆಯಬಹುದು, ಆದ್ದರಿಂದ ನಿಮ್ಮ ಒಂದು ಕಾರ್ಯಕ್ರಮದಂತೆ ಈ ಗಿಡಗಳನ್ನು ಅಲ್ಲಿ ಬೆಳೆಸುತ್ತೀರಾ ? ಈ ಗಿಡಗಳನ್ನಾದರೆ ಒಂದೇ ವರ್ಷದಲ್ಲಿ ಬೆಳೆಸುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಗಿಡಗಳನ್ನು ಬೆಳೆಸುತ್ತೀರಾ ?

ಶ್ರೀ ಜಿ ಮಾದೇಗೌಡ.—ರಿಸರ್ವ್ ಫಾರೆಸ್ಟ್ ಏರಿಯಾದಲ್ಲಿ ಬಳ್ಳಾರಿ ಜಾಲಿ ಮರಗಳನ್ನು ಹುಟ್ಟುವುದಕ್ಕೆ ಹೋಗುವುದಿಲ್ಲ ಎಲ್ಲೆಲ್ಲಿ ಗುಡ್ಡೆ, ಬಂಡೆಗಳು ಇವೆ, ಮತ್ತು ರೋಡ್ಸ್ ಸೈಡ್‌ಗಳಲ್ಲಿ ಮಾತ್ರ ಹೆಚ್ಚುತ್ತವೆ. ಆ ಜಾಗದಲ್ಲಿ ಬೇರೆ ಜಾತಿ ಮರಗಳನ್ನು ಮಾತ್ರ ಹಾಕುತ್ತೇವೆ. ಎಲ್ಲಿ ಮಳೆ ಇಲ್ಲವೋ ಎಲ್ಲಿ ನೀರಿನ ಸೌಲಭ್ಯಗಳು ಇಲ್ಲವೋ ಅಲ್ಲಿ ಒಂದೆರಡು ವರ್ಷ ನೀರನ್ನು ಒದಗಿಸಿಕೊಂಡು ಗಿಡಗಳನ್ನು ಬೆಳೆಸಬೇಕೆನ್ನುವುದೇ ಸರ್ಕಾರದ ಪಾಲಿಸಿಯಾಗಿದೆ. ಆ ದಿಶೆಯಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಭಾಸ್ಕರನಾಯಿಡು.—ಶಿವಮೊಗ್ಗ, ಬಳ್ಳಾರಿ ಜಿಲ್ಲೆಯಲ್ಲಿರುವ ಅರಣ್ಯಗಳು ನಾಶವಾಗುತ್ತಾ ಇವೆ. ಬೇರೆಯವರು ಬಂದು ಆ ಕಾಡನ್ನು ಕಡಿದು ನಾಶ ಮಾಡುತ್ತಿದ್ದಾರೆ. ತಮಗೆ ಹೇಳಬೇಕಾದರೆ ಬಳ್ಳಾರಿಯಲ್ಲೇ ಕಟ್ಟಿಗೆ ಟನ್ ಒಂದಕ್ಕೆ ೩೦೦ ರೂಪಾಯಿ ಆಗಿದೆ. ಮತ್ತು ಬಳ್ಳಾರಿಯಲ್ಲಿರುವವರಿಗೇನೇ ಕಟ್ಟಿಗೆ ಸಿಕ್ಕುವುದಿಲ್ಲ, ಛಾರ್ಜ್ ಮಾಡುತ್ತಾರೆ. ಇದರ ಬಗ್ಗೆ ತಾವೇನಾದರೂ ಕಾರ್ಯ ಕ್ರಮತೆಗೆದುಕೊಳ್ಳುತ್ತೀರಾ ? ಮತ್ತು ರಿಸರ್ವ್ ಫಾರೆಸ್ಟ್‌ನಲ್ಲಿ ಬಳ್ಳಾರಿ ಜಾಲಿಯನ್ನು ಹಾಕುತ್ತೀರಾ?

ಶ್ರೀ ಜಿ. ಮಾದೇಗೌಡ.—ರಿಸರ್ವ್ ಫಾರ್ಸ್ಟ್‌ನಲ್ಲಿ ಬಳ್ಳಾರಿ ಜಾಲಿಯನ್ನು ಹಾಕುವುದಕ್ಕೆ ಅದು ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಮತ್ತು ಬಳ್ಳಾರಿ ಜಿಲ್ಲೆಯವರೇ ಅಲ್ಲಿ ಕಟ್ಟಿಗೆಯನ್ನು ಕಡಿದರೆ ಅದಕ್ಕೆ ನಾವು ಛಾರ್ಜ್ ಮಾಡುವುದಿಲ್ಲ. ಯಾರಾದರೂ ಬಂದು ಕಡಿದುಕೊಂಡು ಹೋಗಬಹುದು. ಅಲ್ಲದೆ ಹೊರಗಡೆಯವರು ಯಾರಾದರೂ ಬಳ್ಳಾರಿ ಜಾಲಿ ಮರಗಳನ್ನು ಬೆಳೆಸಿದರೆ ಅದು ನಮ್ಮ ಜವಾಬ್ದಾರಿಯಲ್ಲ. ನಾವು ಅದಕ್ಕೆ ಕಂದಾಯ ಹಾಕುತ್ತೇವೆ. ಛಾರ್ಜ್ ವಸೂಲ್ಮಾಡುತ್ತೇವೆ.

SRI M. C. NANAIAH.—Mr. Speaker, the Hon. Minister had made a statement yesterday in the Legislative Council that the Forest in Karnataka has been completely denuded of soft and hard wood. Would he at least give an assurance on the floor of this House that whatever felling that is taking place all along the Western ghat in Karnataka and catchment areas of the major rivers in Karnataka will be stopped immediately ?

ಶ್ರೀ ಜಿ. ಮಾದೇಗೌಡ.—ಮಾನ್ಯ ಸದಸ್ಯರನ್ನು ನಾನು ಒಂದು ಪ್ರಶ್ನೆ ಕೇಳುತ್ತೇನೆ ಅದೇನೆಂದರೆ ಪ್ರತಿ ವರ್ಷವೂ ಫಾರೆಸ್ಟ್ ಡಿನ್ಯೂಡ್ ಆಗುತ್ತದೆಯೋ ಎಂದು. ಅವರು ಹೇಳತಕ್ಕಂಥಾದ್ದು ಸರಿಯಲ್ಲ. ಸರ್ಕಾರದ ನಿಲುವು ಇದರ ಬಗ್ಗೆ ಸ್ಪಷ್ಟವಾಗಿದೆ. ಅದೇನೆಂದರೆ ಆದಷ್ಟು ಮಟ್ಟಿಗೆ ಫಾರೆಸ್ಟ್ ರಕ್ಷಣೆ ಮಾಡಬೇಕೆಂಬುದೇ ಸರ್ಕಾರದ ನಿಲುವು. ಹಿಂದಿದ್ದ ಸರ್ಕಾರ ಇದರ ಬಗ್ಗೆ ಏನು ಒಂದು ಇಚ್ಛೆ ಒಂದು ನಿಲುವು ತೆಗೆದುಕೊಂಡಿದ್ದರೊ ಅದಕ್ಕಿಂತಲೂ ಹೆಚ್ಚಾಗಿ ಈಗೀನ ಸರ್ಕಾರ ಒಂದು ಧೃಡ ನಿಲುವನ್ನು ತೆಗೆದುಕೊಂಡಿದೆ. ಯಾವುದೇ ಫಾರೆಸ್ಟ್ ಆಗಲಿ ನಾಶವಾಗದೇ ಇರುವುದಕ್ಕೆ ಏನು ಒಂದು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಜೊತೆಗೆ ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು ಕೊಟ್ಟರೆ ಅದನ್ನು ಅನುಸರಿಸುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ,—ಸ್ವಾಮಿ, ಮಂತ್ರಿಗಳು ಅಥವಾ ವ್ಯಕ್ತಿಗಳು ಬದಲಾವಣೆ ಯಾಗಬಹುದು ಸರ್ಕಾರ ಮಾತ್ರ ಕಂಟಿನ್ಯೂ ಆಗುತ್ತಾ ಇರುತ್ತದೆ. ಅದೇ ರೀತಿ ನೀತಿ ಮತ್ತು ನಿಲುವೂ ಕೂಡ ಒಂದೇ ಆಗಿರುತ್ತದೆ ಈ ದೃಷ್ಟಿಯಿಂದ ಹೇಳುವುದೇನೆಂದರೆ ಅರಣ್ಯದ ಬೆಳವಣಿಗೆಗೆ ಹಾಗೂ ಅದರ ರಕ್ಷಣೆಗೆ ಸರ್ಕಾರದ ನಿರ್ದಿಷ್ಟವಾದ ಕಾರ್ಯಕ್ರಮಗಳೇನು ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ಇತ್ತೀಚಿಗೆ ಹೊರಗಡೆಯವರು ಅರಣ್ಯಗಳನ್ನು ನಾಶಮಾಡ ತಕ್ಕಂಥಾದ್ದು ಏನು ಇದೆ ಹೊರಗಡೆಯವರು ಅಲ್ಲಿರತಕ್ಕಂಥಾ ಮರಗಳನ್ನು ಕಳ್ಳ ಸಾಗಣಿಕೆ ಮಾಡುತ್ತಿರುವುದು ಏನು ಇದೆ ಅದನ್ನು ತಡೆಹಿಡಿಯುವುದಕ್ಕೊಸ್ಕರವಾಗಿ ಮೊಬೈಲ್ ಸ್ಕ್ವಾಡ್ ಮಾಡಿದ್ದೇವೆ. ಮತ್ತು ವೈರ್‌ಲೆಸ್ ಸೆಟ್‌ಗಳ ಮುಖಾಂತರ ಕೇರಳದ ಬಾರ್ಡರ್‌ಗೆ ಹೋಗುವುದನ್ನು ಪತ್ತೆ ಹಚ್ಚುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಇದರ ಜೊತೆಗೆ ಕೆಲವು ಕೈಗಾರಿಕೆಗಳಿಗೆ ಮರ ಗಳನ್ನು ಇಂತಿಷ್ಟು ಕೊಡಬೇಕು ಅಂತ ಏನು ಕೊಟ್ಟಿದ್ದೇವೆ ಅವುಗಳಿಗೆ ಹಾಲಿ ಇರತಕ್ಕಂಥಾ ವುಡ್ ನಲ್ಲಿ ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ ಅನ್ನುವ ಅಭಿಪ್ರಾಯ ಪಟ್ಟಿದ್ದೇವೆ. ನಮಗೆ ಬೇಕಾದಷ್ಟು ಡಿಮ್ಯಾಂಡ್ ಇದ್ದರೂ ಸಹ ಹೊಸ ಕೈಗಾರಿಕೆಗಳಿಗೆ ಮರಗಳನ್ನು ಕೊಡಬಾರದು ಏನ್ನುವ ನೀತಿಯನ್ನು ನಮ್ಮ ಸರ್ಕಾರ ಅನುಸರಿಸಿದೆ.

SRI ABDUL LATHEEF.—In the answer to 'C, different figures are given for different taluks. May I know, what are the norms in fixing up these acres ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿದ್ದೇವೆ. ೮ ವರ್ಷದೊಳಗೆ ಎಲ್ಲಾ ಜಿಲ್ಲೆಯಲ್ಲಿರತಕ್ಕಂಥಾ ಜಮೀನುಗಳಿಗೂ ಪ್ಲಾಂಟ್ ಮಾಡಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ೬೦ ಕೋಟಿ ರೂಪಾಯಿನ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ಬರೆದು ಕಳುಹಿಸಿದ್ದೇವೆ. ಅದು ಅಲ್ಲಿಂದ ಬಂದರೆ ಬಿಜಾಪುರದಲ್ಲಿರತಕ್ಕಂಥಾ ಎಲ್ಲಾ ಜಮೀನುಗಳಿಗೂ ಕೂಡ ಆ ಗಿಡಗಳನ್ನು ಹಾಕುವುದಕ್ಕೆ ತಕ್ಕ ಕಾರ್ಯ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ.

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಮಂತ್ರಿಗಳು ಉತ್ತರ ಹೇಳುವುದನ್ನು ನೋಡಿದರೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ರಿಸರ್ವ್ ಫಾರೆಸ್ಟ್ ಯಾವ ರೀತಿ ಇದೆ ಅನ್ನುವುದನ್ನು ಕಂಡುಕೊಂಡಿಲ್ಲ ಅನ್ನು ವುದು ಗೊತ್ತಾಗುತ್ತದೆ. ತಮಗೆ ನಿರ್ದಿಷ್ಟವಾಗಿ ಹೇಳಬೇಕಾದರೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಯಾವ ರೀತಿ ಯಾದ ಫಾರೆಸ್ಟ್ ಇಲ್ಲ, ಒಂದು ಗಿಡವೂ ಇಲ್ಲ. ಆ ಜಿಲ್ಲೆಯನ್ನು ಹಸಿರು ಕ್ರಾಂತಿ ಮಾಡ ಬೇಕೆನ್ನುವ ದೃಷ್ಟಿಯಿಂದ ಬಳ್ಳಾರಿ ಜಾಲಿ ಗಿಡಗಳನ್ನು ಅಲ್ಲಿ ತುಂಬ ಹೆಚ್ಚುವುದಕ್ಕೆ ಪ್ರಯತ್ನ ಮಾಡು ತ್ತೀರಾ ? ಈಗ ಅಲ್ಲಿ ಏನೇನೂ ಇಲ್ಲ. ಒಂದು ವರ್ಷದಲ್ಲಿ ಈ ಕಾರ್ಯಕ್ರಮ ಮುಗಿಸು ತ್ತೀರಾ ?

ಶ್ರೀ ಜಿ. ಮಾದೇಗೌಡ.—ರಿಸರ್ವ್ ಫಾರೆಸ್ಟ್ ಇದ್ದ ಕಡೆ ಆ ಗಿಡಗಳನ್ನು ಹೆಚ್ಚುವುದಕ್ಕಾಗುವು ದಿಲ್ಲ. ಎಲ್ಲಿ ಬಂಡೆ, ಗುಡ್ಡಗಾಡು ಪ್ರದೇಶ ಇರುತ್ತದೋ, ಅಂಥಾ ಕಡೆ ಹೆಚ್ಚುತ್ತೇವೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಈ ವರ್ಷ ಈ ಗಿಡಗಳನ್ನು ೧೦೦ ಹೆಕ್ಟಾರ್ ಪ್ರದೇಶದಲ್ಲಿ ಬೆಳೆಸುತ್ತೆವೆಂದು ಹೇಳಿದಿರಿ. ಅದಕ್ಕೆ ಎಷ್ಟು ಖರ್ಚು ಬೀಳುತ್ತದೆ ಎನ್ನುವುದನ್ನು ಹೇಳುತ್ತೀರಾ ?

SRI G. MADEGOWDA.—I want notice.

Revival of cash loans to Individuals by Karnataka Housing Board.

555 SRI H. L. THIMMEGOWDA (Basavanagudi).—Will the Minister for Housing and Urban Development be pleased to state.—

(a) whether it has come to the notice of the Government that tho House Building activity of residential houses in Bangalore and in other Urban Areas has been greatly reduced and there are no agencies to give cash loans to build residential houses:

(b) whether the government will revive the policy of giving cash loans to individuals under the various housing Schemes as it existed prior to 1972 through the Karnataka Housing Board ?

SRI DHARAM SINGH NARAYAN SINGH (Minister for Housing and Urban Development).—

(a) It has not come to the knowledge of Government that the house building activities of residential houses in Bangalore and other Urban Areas has been reduced, due to the discontinuance of the policy of giving cash loans, by Karnataka Housing Board.

(b) Government has no intention to revive the policy of giving cash loans.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಪದ್ಧತಿಯನ್ನು ಮುಂದುವರಿಸದಿರುವುದರಿಂದಾಗಿ ಬೆಂಗಳೂರು ಹಾಗೂ ಇತರ ನಗರ ಪ್ರದೇಶಗಳಲ್ಲಿ ವಾಸದ ಮನೆಗಳ ನಿರ್ಮಾಣದ ಚಟುವಟಿಕೆಯು ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಹೇಳಿದ್ದಾರೆ, ಹಾಗಾದರೆ ಸರ್ಕಾರದ ಗಮನಕ್ಕೆ ಬರಬೇಕು ಎಂದರೆ ಜಾತಾ ಹೋಗತಕ್ಕಂಥಾದ್ದು, ಸ್ಟೈಕ್ ಮಾಡತಕ್ಕಂಥಾದ್ದು ಮಾಡಿದರೆ ಸರ್ಕಾರದ ಗಮನಕ್ಕೆ ಬರುತ್ತದೆ ಅಂದ ಹಾಗಾಯಿತು. ನಾನು ಕೇಳುವುದು ಇಷ್ಟೆ. ಬೆಂಗಳೂರಿನಲ್ಲಿ ಇದುವರೆಗೆ ಎಷ್ಟು ಮನೆಗಳನ್ನು ಕಟ್ಟಿದ್ದೀರಿ. ಮತ್ತು ಸಾಲ ಕೊಡದಿರುವುದನ್ನು ಎಷ್ಟು ಜನರಿಗೆ ನಿಲ್ಲಿಸಿದ್ದೀರಿ ಸಾಲ ಸಿಗದೆ ಮನೆಗಳು ಕಟ್ಟಿದೇ ಇರುವ ಸಂಖ್ಯೆ ಎಷ್ಟು ಎಂದು ಹೇಳುತ್ತೀರಾ? ಇದರಿಂದ ಹೌಸಿಂಗ್ ಬೋರ್ಡ್‌ನ ಕಾರ್ಯ ಚಟುವಟಿಕೆ ನಿಂತಿಲ್ಲವೇ ?

ಶ್ರೀ ಧರ್ಮಸಿಂಗ್.—ನಾವು ಕ್ಯಾಷ್ ಲೋನ್ ಅನ್ನು ೧೯೭೨ರಲ್ಲಿ ನಿಲ್ಲಿಸಿದ್ದೇವೆ. ಹಾಗೆ ನಿಲ್ಲಿಸಿದ ಪಾತ್ರಕ್ಕೆ ಹೌಸಿಂಗ್ ಬೋರ್ಡ್ ಕಾರ್ಯ ಚಟುವಟಿಕೆ ನಿಂತಿಲ್ಲಾ. ಬೇಕಾದರೆ ನಿಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ.

ಶ್ರೀ ಪಿ. ರಾಂದೇವ್.—ಈ ಹೌಸಿಂಗ್ ಬೋರ್ಡ್ ಆಕ್ಟಿವೀಟೀಸ್ ನಿಂತಿದೆಯೋ ಇಲ್ಲವೇ ಅನ್ನುವುದು ಗೊತ್ತಾಗುತ್ತದೆ. ಆದರ ಅಂಕಿ ಅಂಶಗಳು ಕೊಟ್ಟರೆ ಒಳ್ಳೆಯದು.